42. Allamaprabhu Patil	50/80	L-191 HSR Sec -6
43. Siddalingaswamy	50/80	132NB 2/9th Blk
44. Rajendra Singh Babu	40/60	494 HSR Sec -2
45. C.C.Patil	50/80	12 JB (NDH)
46. R.Deepak		40/60 599 NB 2/9th Blk
47. Shobha Karandlaje		50/80 133/A HSR Sec -1
48. Sannamma		50/80 L-199 HSR Sec -6
49. Rajashekar B.Patil	50/80	L-204 HSR Sec -6
50. Kiran Kumar	30/40	L-204 HSR Sec -6
51. B.K.Sangameshwar	50/80	L-197 HSR Sec -6
52. Madhavan Nair ISRO	50/80	629 HSR Sec -6
53. BabUrao Kulkarni	50/80	L-205 HSR Sec -6
54. K.S.Eswarappa	50/80	42/A HSR Sec -6
55. R.P.Shankar	40/60	33/A HSR Sec -6
56. Jagadish MetgUd	50/80	160NB 2/9th Blk
57. N.Murthy	50/80	1344 BTM 4/2nd Blk

3520(4302) ಶ್ರೀ ಆರ್.ಅಶೋಕ್ (ಉತ್ತರಹಳ್ಳಿ)– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಲಿ ಇರುವ ಸಾರ್ವಜನಿಕಮನರಂಜನಾ ನಿಯಮಗಳಾವುವು; ಇವುಗಳಿಗೆ ತಿದ್ದುಪಡಿ ಹಾಗೂ ಹೊಸದಾಗಿ ರೂಪಿಸಲು ಸರ್ಕಾರ ಚಿಂತನೆ ನಡೆಸಿದೆಯೇ;

ಆ) ಲೈವ್ ಬ್ಯಾಂಡ್, ಕ್ಲಬ್‌ಗಳನ್ನು ಸಂಪೂರ್ಣ ಕಾರ್ಯ ನಿರ್ವಹಿಸದಂತೆ ತಡೆಯಲು ಸರ್ಕಾರಕ್ಕೆ ಸಾಧ್ಯವಿಲ್ಲವೆ; ಇದಕ್ಕಿರುವ ತೊಂದರೆಗಳೇನು; (ತಿಳಿಸುವುದು);

ಇ) ಬೆಂಗಳೂರು ನಗರವು ಸೇರಿದಂತೆ ರಾಜ್ಯದಲ್ಲಿರುವ ಲೈವ್‌ಬ್ಯಾಂಡ್‌ಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಪೂರ್ಣವಿವರ ನೀಡಿರಿ) ;

ಈ) ಈ ಲೈವ್‌ಬ್ಯಾಂಡ್‌ಗಳ ಪ್ರತಿದಿನದ ಸರಾಸರಿ ವರಮಾನ ಎಷ್ಟು ;

ಉ) ಇವುಗಳ ಹಾವಳಿತಡೆಗಟ್ಟಲು ಸರ್ಕಾರದಕ್ರಮಗಳೇನು (ವಿವರ ಒದಗಿಸುವುದು);

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)–

ಅ) ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಈ ಕೆಳಕಂಡಂತೆ ನಿಯಮಗಳು ಚಾಲ್ತಿಯಲ್ಲಿರುತ್ತದೆ.

(1) ದಿ ಲೈಸೆನ್ಸಿಂಗ್ ಅಂಡ್ ಕಂಟ್ರೋಲಿಂಗ್ ಆಫ್ ಪ್ಲೇಸಸ್ ಆಫ್ ಪಬ್ಲಿಕ್ ಅಮ್ಯೂಸ್‌ಮೆಂಟ್ಸ್ (ಬೆಂಗಳೂರು ಸಿಟಿ) ಆರ್ಡರ್ 2002.

(2) ದಿ ಲೈಸೆನ್ಸಿಂಗ್ ಅಂಡ್ ಕಂಟ್ರೋಲಿಂಗ್ ಆಫ್ ಪ್ಲೇಸಸ್ ಆಫ್ ಪಬ್ಲಿಕ್ ಎಂಟರ್‌ಟೈನ್ ಮೆಂಟ್ (ಬೆಂಗಳೂರು ಸಿಟಿ) ಆರ್ಡರ್ 2005 ಚಾಲ್ತಿಯಲ್ಲಿರುತ್ತದೆ. ಹೊಸದಾಗಿ ದಿ ಲೈಸೆನ್ಸಿಂಗ್ ಅಂಡ್ ಕಂಟ್ರೋಲಿಂಗ್ ಆಫ್ ಪ್ಲೇಸಸ್ ಆಫ್ ಪಬ್ಲಿಕ್ ಎಂಟರ್‌ಟೈನ್ ಮೆಂಟ್ (ಬೆಂಗಳೂರು ಸಿಟಿ) ಆರ್ಡರ್ 2005 ದಿನಾಂಕ:23.05.05 ರಂದು ಅಧಿಸೂಚನೆ ಹೊರಡಿಸಲಾಗಿದೆ. ಈ ಅಧ್ಯಿಸೂಚನೆಯನ್ವಯ ಬೆಂಗಳೂರು ನಗರದಲ್ಲಿ ಸಾರ್ವಜನಿಕ ಮನರಂಜನಾ ಕೇಂದ್ರವನ್ನು ನಡೆಸಲು ಪರವಾನಗಿಯನ್ನು ಪಡೆಯುವುದು ಅವಶ್ಯಕವಾಗಿರುತ್ತದೆ.

ಆ) ಇಲ್ಲ, ಲೈವ್ ಬ್ಯಾಂಡ್, ಕ್ಲಬ್‌ಗಳನ್ನುಪೂರ್ತಿಯಾಗಿ ಕಾರ್ಯನಿರ್ವಹಿಸದಂತೆ ತಡೆಯಲು ಸಾಧ್ಯವಾಗುವುದಿಲ್ಲ. ಲೈವ್‌ಬ್ಯಾಂಡ್, ಕ್ಲಬ್‌ಗಳನ್ನು ನಡೆಸಲು ಪೋಲಿಸ್ ಆಯುಕ್ತರಿಂದ ಪರವಾನಗಿಯನ್ನು ಪಡೆಯಬೇಕಾಗಿದೆ ಮತ್ತು ಸದರಿ ಲೈವ್ ಬ್ಯಾಂಡ್ ನಡೆಸಲು ಅನುಮತಿ ನೀಡುವ ಮುನ್ನ ಮೊದಲಿಗೆ ಅವುಗಳನ್ನು ನಿರ್ದಿಷ್ಟಪಡಿಸಿದ ನಿಯಮಗಳ ಪ್ರಕಾರ ಪರಿಶೀಲಿಸಲಾಗುವುದು.

ಇ) 1)ಬೆಂಗಳೂರು ನಗರದಲ್ಲಿ ಒಟ್ಟು ಸಂಖ್ಯೆ 51
2) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು ಸಂಖ್ಯೆ 11
3) ಉಡುಪಿ ಜಿಲ್ಲೆಯಲ್ಲಿ ಒಟ್ಟು ಸಂಖ್ಯೆ 2
ಒಟ್ಟು 64

ಈ) ವರಮಾನದ ಬಗ್ಗೆ ಪೋಲಿಸ್ ಇಲಾಖೆಯಲ್ಲಿ ಮಾಹಿತಿ ಇರುವುದಿಲ್ಲ.

ಉ)

1) ಪ್ರಸ್ತುತ ನಿಯಮಗಳ ಪ್ರಕಾರ ಕಡ್ಡಾಯವಾಗಿ ಪರವಾನಿಗೆ ಪಡೆಯಬೇಕು.

2) ಎಲ್ಲಾ ಷರತ್ತುಗಳನ್ನು ಪಾಲಿಸಲು ಸೂಚಿಸಲಾಗಿದೆ.

3521 (4303) ಶ್ರೀ ಆರ್.ಅಶೋಕ್ (ಉತ್ತರಹಳ್ಳಿ)– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರ ಹಾಗೂ ಹೊರ ಭಾಗಗಳಲ್ಲಿ ಭೂ ಕಬಳಿಕೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ) ಬಂದಿದ್ದಲ್ಲಿ, ಕಬಳಿಕೆ ಯಾಗಿರುವ ಭೂಮಿ ಜಾಗವೆಷ್ಟು; ಯಾವ ಪ್ರದೇಶದಲ್ಲಿ ಯಾರ್ಯಾರು; ಎಷ್ಟೆಷ್ಟು ಭೂಮಿಯನ್ನು ಕಬಳಿಸಿದ್ದಾರೆಂಬ ಪೂರ್ಣ ಮಾಹಿತಿ ವಿವರಗಳನ್ನು ಒದಗಿಸುವುದು;

ಇ) ಭೂ ಕಬಳಿಕೆದಾರರ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು ;

ಈ) ಸರ್ಕಾರ ಭೂ ಕಬಳಿಕೆದಾರರುಗಳಿಂದ ವಶಪಡಿಸಿಕೊಂಡಿರುವ ಭೂಮಿ ಎಷ್ಟು; ಅದರ ಮೌಲ್ಯವೆಷ್ಟು; (ವಿವರ ಒದಗಿಸುವುದು);

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು)–

ಅ) ಹೌದು.

ಆ) ವಿಭಾಗಾಧಿಕಾರಿ ಬೆಂಗಳೂರುಇವರು 201 ರಂದು ಸರ್ಕಾರಕ್ಕೆ ಸಲ್ಲಿಸಿರುವ ವರದಿಯ ಮೇರೆಗೆತಾತ್ಕಾಲಿಕ ಅಂಕಿ ಅಂಶಗಳನ್ವಯ ಬೆಂಗಳೂರು ಸುತ್ತಮುತ್ತಲು ಕಂದಾಯ ಈ ಕೆಳಕಂಡ ವಿಸ್ತೀರ್ಣದ ಜಾಗ ಒತ್ತುವರಿ/ ಭೂಗಳ್ಳತನಕ್ಕೆ ಒಳಗಾಗಿದೆ ಎಂದು ಸರ್ಕಾರದ ಗಮನಕ್ಕೆ ಬಂದಿದೆ.

ಕ್ರ ಸಂ.	ಪ್ರಕರಣಗಳ ವಿವರ	ಒಟ್ಟು ಪ್ರಕರಣಗಳು	ಜಮೀನಿನ ವಿಸ್ತೀರ್ಣ (ಎಕರೆಗಳಲ್ಲಿ)	ಅಂದಾಜು ಮೌಲ್ಯ (ಲಕ್ಷಗಳಲ್ಲಿ)
1.	ಸರ್ಕಾರದ ಜಮೀನಿನಲ್ಲಿ ಅನಧಿಕೃತವಾಗಿ ಕಟ್ಟಡಗಳನ್ನು ಕಟ್ಟಿರುವುದು	24,042	1,774.35	2,874
2.	ಬೇನಾಮಿ/ ಖೋಟಾ ದಾಖಲೆಯಿಂದ ಭೂಕಬಳಿಕೆ	208	1,273	4,921